ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಏನು ಇದೆ, ಅವರಿಂದ ಸರ್ಟಿಫೈ ಮಾಡಿ ಅವರು ಕೊಡಬೇಕಾಗುತ್ತದೆ ಹೀಗಾಗಿ ನಾವು ಅವರಿಗೆ ಆ ಪಟ್ಟಿಯನ್ನು ಕೊಟ್ಟು ಈ ಮಾಹಿತಿ ಸರಿ ಇದೆಯೋ ಇಲ್ಲವೋ ಎಂದು scrutiny ಮಾಡಿ ಕೊಡಿ ಎಂದು ಹೇಳಿದ್ದೇವೆ ಅವರಿಂದ ಬಂದ ತಕ್ಷಣ ನಾವು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಅವರೇನಾದರೂ ಎಸ್‌ಸಿ–ಎಸ್‌ಟಿ ಪಂಗಡದವರಾಗಿದ್ದರೆ ಅವರಿಗೆ ಸಂಪೂರ್ಣವಾಗಿ 30 ಸಾವಿರ ರೂಪಾಯಿಯ ಅನುದಾನವನ್ನು ಕೊಡುತ್ತೇವೆ ದೇವದಾಸಿ ಪದ್ಧತಿಯೊಳಗೆ ಜನರಲ್ ಕಮ್ಯುನಿಟಿಯವರು ಏನಾದರೂ ಬಂದರೆ ಅವರಿಗೆ 15 ಸಾವಿರ ಸಬ್ಸಿಡಿ ಮತ್ತು 15 ಸಾವಿರ ರೂಪದಲ್ಲಿ ಕೊಡುತ್ತೇವೆ ಒಟ್ಟಿನಲ್ಲಿ ಒಂದು ಯೂನಿಟ್ ಕಾಸ್ಟ್ 30 ಸಾವಿರ ರೂಪಾಯಿ ಎಂದು ಮಾಡಿ ಮನೆಗಳನ್ನು ಕಟ್ಟಿಸತಕ್ಕಂತಹ ಕೆಲಸವನ್ನು ಮಾಡಿದ್ದೇವೆ Scrutiny ಆದ ತಕ್ಷಣ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಪ್ರಾರಂಭ ಮಾಡುತ್ತೇವೆ

ಶ್ರೀ ಆರ್ ರೋಷನ್ ಬೇಗ್ – ಯಾವಾಗ ಆರಂಭ ಮಾಡುತ್ತೀರಿ?

ಶ್ರೀ ಡಿ ಟಿ ಜಯಕುಮಾರ್ – ಇದು ನೂತನ ಯೋಜನೆಯಾಗಿದ್ದು ಈಗಾಗಲೇ 10065 ಜನರನ್ನು ಗುರುತಿಸಿದ್ದು ಅವರ ಬಗ್ಗೆ scrutiny ನಡೆಯುತ್ತಿದೆ, ಅಲ್ಲಿಂದ ಬಂದ ತಕ್ಷಣ ಮನೆಕಟ್ಟತಕ್ಕಂಥ ಕೆಲಸವನ್ನು ಪ್ರಾರಂಭ ಮಾಡುತ್ತೇವೆ

ಶ್ರೀ ಆರ್ ರೋಷನ್ ಬೇಗ್ – ಏನಾದರೊಂದು ಡೆಡ್‌ಲೈನ್ ಇಟ್ಟಿದ್ದೀರಾ? scrutiny by this date complete ಆಗಬೇಕು, ಈ ತಿಂಗಳಿನಿಂದ ನಾವು ಪ್ರಾರಂಭ ಮಾಡುತ್ತೇವೆಂದು ಹೇಳಿದರೆ ಅನುಕೂಲ

ಶ್ರೀ ಡಿ ಟಿ ಜಯಕುಮಾರ್ – ಇದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ನಾವು ಆ ಜವಾಬ್ದಾರಿಯನ್ನು ವಹಿಸಿದ್ದೇವೆ ಅವರು ಅದನ್ನು scrutiny ಮಾಡಿ ಇವರು ಸರಿಯಾಗಿದೆ ಎಂದು ಸರ್ಟಿಫೈ ಮಾಡಿದರೆ ಮನೆಗಳನ್ನು ಕಟ್ಟಲಿಕ್ಕೆ ಪ್ರಾರಂಭ ಮಾಡುತ್ತೇವೆ

ಪ್ರಶ್ನೆ ಸಂಖ್ಯೆ 1317

ಉಪಾಧ್ಯಕ್ಷರು – ಪಾಟೀಲರೆ, ಮಂತ್ರಿಗಳು ಸಬ್ ಕಮಿಟಿಯಲ್ಲಿದ್ದಾರಂತೆ ಅವರು ಬಂದ ಮೇಲೆ ಇದನ್ನು ತೆಗೆದುಕೊಳ್ಳೋಣ

ಶ್ರೀ ಎಂ ವೈ ಪಾಟೀಲ್ – ಆಗಬಹುದು

ಕಬಿನಿ ಜಲಾಶಯದ 2ನೇ ಹಂತವನ್ನು ಕಾರ್ಯರೂಪಕ್ಕೆ ತರುವುದು

290 (2300) ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) – ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬಿನಿ 2ನೇ ಹಂತ ಶಂಕುಸ್ಥಾಪನೆಯಾಗಿ ಎಷ್ಟು ವರ್ಷವಾಯಿತು,

ಆ) ಇದರ ಅಂದಾಜು ವೆಚ್ಚವೆಷ್ಟು,

ಇ) ಯಾವಾಗ ಇದನ್ನು ಕಾರ್ಯರೂಪಕ್ಕೆ ತರಲಾಗುವುದು?

ಶ್ರೀ ಕೆ ಎಸ್ ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು)

ಅ) 20 ವರ್ಷವಾಯಿತು (ಕಬಿನಿ ಎರಡನೇ ಹಂತದ ಯೋಜನೆಗೆ 1987 ರಲ್ಲಿ ಶಂಕುಸ್ಥಾಪನೆ ಮಾಡಲಾಗಿತ್ತು)

ಆ) ರೂ 702 00 ಕೋಟಿಗಳು (ಸಮಗ್ರ ಕಬಿನಿ ಯೋಜನೆಯ ಅಂದಾಜು 2002–03ರ ದರದಂತೆ ರೂ 1233 00 ಕೋಟಿಗಳಲ್ಲಿ ಈ ಮೊತ್ತವೂ ಸೇರಿರುತ್ತದೆ)

ಇ) ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ತೀರ್ಮಾನಿಸಲಾಗುವುದು

ಶ್ರೀ ವಾಟಾಳ್ ನಾಗರಾಜ್ – ಇದೊಂದು ಕನಸು ಮಾನ್ಯ ಈಶ್ವರಪ್ಪನವರು ಹೇಳಿದ್ದಾರೆ ಕಾವೇರಿ ನ್ಯಾಯ ಮಂಡಳಿಯ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ನೀಡಿರುವ ನೀರಿನ ಹಂಚಿಕೆ ಕುರಿತು ಪರಿಶೀಲಿಸಿ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಉತ್ತರ ಕೊಟ್ಟಿದ್ದಾರೆ ಸರ್ಕಾರಕ್ಕೆ ನಂಬಿಕೆಯಿಲ್ಲ ನಾವು ಏನು ಮಾಡಬೇಕೆಂಬುದರ ಬಗ್ಗೆ ಸರ್ಕಾರಕ್ಕೆ ನಂಬಿಕೆಯಿಲ್ಲ ನೀವು ಈ ರೀತಿಯ